2. ದಿನಾಂಕ 21ನೇ ಮಾರ್ಚ್, 2003ರ ಶುಕ್ರವಾರದಂದು, ರಾಜ್ಯದ ಆಯವ್ಯಯದ ಮಂಡನೆ.
3. ಪ್ರತಿದಿನ ಮಧ್ಯಾಹ್ನ 1.30 ರಿಂದ 2.30 ಘಂಟೆಯವರೆಗೆ ಊಟದ ವಿರಾಮ.
4. ಈ ಹಿಂದೆ ತೀರ್ಮಾನಿಸಿದಂತೆ ಪ್ರತಿದಿನ ವಿರಾಮದ ನಂತರ ಒಂದು ಅಥವಾ ಎರಡು ವಿಧೇಯಕಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವುದು.
5. ದಿನಾಂಕ 24.03.2003 ರಿಂದ 31.03.2003 ರವರೆಗೆ ಸರ್ಕಾರಿ ಕಾರ್ಯಕಲಾಪಗಳು.
6. ಸದನದ ಕಾರ್ಯಕಲಾಪಗಳನ್ನು ಪ್ರತಿದಿನ ಸಾಯಂಕಾಲ 6.30 ಘಂಟೆಯವರೆಗೆ ನಡೆಸಲಾಗುವುದು.

ಸದನವು ಇದ್ದಕೆ ಒಪ್ಪಿಗೆ ನೀಡಿದೆಯೆಂದು ಭಾವಿಸುತ್ತೇನೆ.

ಈಗ ಸದನವನ್ನು ನಾಳೆ ಬೆಳಿಗ್ಗೆ 11ರವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 30 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 12ನೇ ಮಾರ್ಚ್ 2003ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

+(ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

7. ಅನುಬಂಧ - I

ಹಳೆಯಂಗಡಿ ಕದಿಕೆಯಿಂದ ಸಸಿಹಿತ್ಲು ಕಾಲು ಸೇತುವೆ ನಿರ್ಮಾಣ

731(105) ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಳೆಯಂಗಡಿಯಿಂದ ಸಸಿಹಿತ್ಲುಗೆ ಮೀನಿಗಾರಿಕಾ ವ್ಯವಹಾರ ಸುಗಮವಾಗಿ ನಡೆಯಲು ನಂದಿನಿ ನದಿಗೆ ಕಾಲು ಸೇತುವೆ ನಿರ್ಮಾಣ ಮಾಡಲು ಮನವಿಯೇನಾದರೂ ಸರಕಾರಕ್ಕೆ ಬಂದಿದೆಯೇ?

ಆ) ಕಾಲು ಸೇತುವೆ ಇಲ್ಲದೆ ದೋಣಿಯಲ್ಲಿ ಜನರು ನದಿ ದಾಟುವುದರಿಂದ ಆಗುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಕಾಲು ಸೇತುವೆ ನಿರ್ಮಿಸಲು ಬೇಕಾಗುವ ಅಂದಾಜು ವೆಚ್ಚವೆಷ್ಟು?

ಈ) ಸರಕಾರವು ಪ್ರಸಕ್ತ ಸಾಲಿನಲ್ಲಿ ಈ ಕಾಲು ಸೇತುವೆ ನಿರ್ಮಾಣ ಯೋಜನೆಗೆ ಮಂಜೂರಾತಿ ನೀಡುವುದೇ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) ಹೌದು, ಹಳೆಯಂಗಡಿಯ ಕಡಿಕೆಯಿಂದ ಸಸಿಹಿತ್ಲುಗೆ ಕಾಲು ಸೇತುವೆ ನಿರ್ಮಾಣ ಮಾಡಲು ಬೇಡಿಕೆ ಬಂದಿದೆ.

ಆ) ಬಂದಿದೆ.

ಇ) ಈ ಕಾಲು ಸೇತುವೆ ಕಾಮಗಾರಿಯ ಅಂದಾಜು ವೆಚ್ಚ ರೂ. 20.00 ಲಕ್ಷ.

ಈ) ಈ ಕಾಮಗಾರಿ ಬಗ್ಗೆ ಸರ್ಕಾರ ಸಾರ್ವಜನಿಕ ಹಿತದೃಷ್ಟಿಯಿಂದ ಮರುಪರಿಶೀಲನೆ ನಡೆಸಿ ವಾಹನ ಸಂಚಾರದ ಸೇತುವೆ ನಿರ್ಮಾಣವನ್ನು ರೂ. 90.00 ಲಕ್ಷ ಅಂದಾಜು ವೆಚ್ಚದಲ್ಲಿ

ಹಳೆಯಂಗಡಿಯ ಕಡಿಕೆಯಿಂದ ಸಸಿಹಿತ್ಲು ಮಧ್ಯೆ ಸೇತುವೆ ನಿರ್ಮಿಸಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ. ನಬಾರ್ಡ್ ಸಂಸ್ಥೆಯಿಂದ ಮಂಜೂರಾತಿ ದೊರೆತ ನಂತರ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಲಿಂಗಸೂಗೂರು ತಾಲ್ಲೂಕಿನ ಬುದ್ದಿನ್ನಿ ಕೆರೆ ನಿರ್ಮಾಣ

732(825) ಶ್ರೀ ಅಮರೇಗೌಡಪಾಟೀಲ್ ಬಯ್ಯಾಪುರ (ಲಿಂಗಸಗೂರು) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಬುದ್ದಿನ್ನಿ ಕೆರೆಯ ನಿರ್ಮಾಣದ ಕಾಮಗಾರಿಯ ಯಾವ ಹಂತದಲ್ಲಿದೆ :

ಆ) ಸದರಿ ಕೆರೆಯ ನಿರ್ಮಾಣದ ಯೋಜನೆಗೆ ಬೇಕಾದ ಭೂಸ್ವಾಧೀನ ಪ್ರಕ್ರಿಯೆ ಮುಗಿದಿದೆಯೇ: ಮುಗಿಯದಿದ್ದಲ್ಲಿ, ವಿಳಂಬವಾಗಲು ಕಾರಣವೇನು?

ಇ) ಸದರಿ ಕೆರೆಯ ಯೋಜನೆಯ ಭೂಸ್ವಾಧೀನ ಪ್ರಕರಣಕ್ಕೆ ಬೇಕಾಗುವ ಹಣವನ್ನು ಸರ್ಕಾರವು ಸಂಪೂರ್ಣವಾಗಿ ಭರಿಸಿದೆಯೇ: ಇಲ್ಲದಿದ್ದಲ್ಲಿ, ಕಾರಣಗಳೇನು?

ಈ) ಸದರಿ ಕಾಮಗಾರಿಯು ಯಾವಾಗ ಪ್ರಾರಂಭವಾಗಿ ಯಾವಾಗ ಮುಕ್ತಾಯವಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ಈ ಕೆರೆ ನಿರ್ಮಾಣ ಕಾಮಗಾರಿಯನ್ನು ಟೆಂಡರ್ ಮೇಲೆ ಗುತ್ತಿಗೆದಾರರಿಗೆ ವಹಿಸಿ ಕೊಡಲಾಗಿದ್ದು, ಸಧ್ಯ ಕಾಮಗಾರಿ ಪ್ರಾರಂಭಿಸದಂತೆ ಹೈಕೋರ್ಟ್ ತಡೆಯಾಜ್ಞೆ ಇರುವುದರಿಂದ ಕಾಮಗಾರಿ ಪ್ರಾರಂಭಿಸಿರುವುದಿಲ್ಲ.

ಆ) ಸದರಿ ಕೆರೆಯ ಮುಳುಗಡೆ ಪ್ರದೇಶದಲ್ಲಿ ಬರುವ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಯಯಲ್ಲಿ 4(1) ಅಧಿಸೂಚನೆ ಪೂರ್ಣಗೊಂಡಿದ್ದು, 6(1) ಅಧಿಸೂಚನೆಯ ಕಾರ್ಯ ಪ್ರಗತಿಯಲ್ಲಿದೆ. ಈ ಪ್ರಕ್ರಿಯೆಯು ಕಂದಾಯ ಇಲಾಖೆಯಿಂದ ನಿರ್ವಹಿಸಲ್ಪಡುತ್ತದೆ.

ಇ) ಸದರಿ ಕೆರೆಯ ಯೋಜನೆಯ ಭೂಸ್ವಾಧೀನಕ್ಕೆ ಬೇಕಾಗುವ ಶೇ.30ರಷ್ಟು ಹಣ ಅಂದರೆ ರೂ.13.00 ಲಕ್ಷಗಳಷ್ಟು ಈಗಾಗಲೇ ಠೇವಣಿ ಮಾಡಿದ್ದು, ಬಾಕಿ ಹಣವನ್ನು 61(1) ಆದ ಆದ ಅಧಿಸೂಚನೆ ನಂತರ ಬಿಡುಗಡೆ ಮಾಡಲಾಗುವುದು.

ಈ) ಕಾಮಗಾರಿಯನ್ನು ಟೆಂಡರ್ ಮೂಲಕ ನೀಡಲಾಗಿದೆ. ಈ ಕಾಮಗಾರಿಯನ್ನು ಪೂರ್ಣಗೊಳಿಸಲು 12 ತಿಂಗಳ ಅವಧಿ ನೀಡಲಾಗಿದ್ದು, ಸಧ್ಯ ಕಾಮಗಾರಿ ಪ್ರಾರಂಭಿಸದಂತೆ ಹೈಕೋರ್ಟ್ ತಡೆಯಾಜ್ಞೆಯಿರುವುದರಿಂದ ಕಾಮಗಾರಿ ಪ್ರಾರಂಭಿಸಿರುವುದಿಲ್ಲ. ಹೈಕೋರ್ಟ್ ತಡೆಯಾಜ್ಞೆ ತೆರವಾದ ನಂತರ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುವುದು

ಚಿಕ್ಕಬಳ್ಳಾಪುರ ಕ್ಷೇತ್ರದ 'ಡಿ' ಪಾಳ್ಯ ಕ್ಕೆ ಹೊಸ ಪೋಲಿಸ್ ಠಾಣೆ ಮಂಜೂರಾತಿ

734(1124) ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ವಿ. (ಚಿಕ್ಕಬಳ್ಳಾಪುರ) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?